**<u>ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಶ್ರೀ. ಪಿ.ಜೆ.ಜೆ. ವಕೀಲರವರಿಂದಃ</u>**

1. 1 ನೇ ದಾವಾ ಅಸ್ತಿ ಚೆನ್ನಯ್ಯ ತಂದೆ ದತ್ತಯ್ಯ ಇವರಿಗೆ ಸೇರಿದ್ದು ಅಂದರೆ ಸರಿಯಲ್ಲ. ಸದರಿ ಚೆನ್ನಯ್ಯ ಇವರು ನೊಂದಾಯಿತ ಖರೀದಿ ಪತ್ರದ ಮೂಲಕ ವಾದಿಗೆ 25000 ಕ್ಕೆ ಮಾರಾಟ ಮಾಡಿರುವರು ಅಂದರೆ ಸರಿಯಲ್ಲ. 2 ನೇ ದಾವಾ ಅಸ್ತಿ ಮೂಲತಃ ಮಲ್ಲಪ್ಪ ತಂದೆ ಬಸ್ಸಪ್ಪ ಇವರಿಗೆ ಸೇರಿದ್ದು ಅಂದರೆ ಸರಿಯಲ್ಲ. ಅವರು 19.03.2004 ರಂದು ವಾದಿಯ ಗಂಡ ವಸಂತಪ್ಪನಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುವರು ಅಂದರೆ ಸರಿಯಲ್ಲ. ವಸಂತಪ್ಪ ಇವರು ವಾದಿಗೆ ದಿನಾಂಕ 23.04.2009 ರಂದು ದಾವಾ ಸ್ವತ್ತನ್ನು ದಾನ ಪತ್ರದ ಮೂಲಕ ಬರೆದುಕೊಟ್ಟಿರುವರು ಅಂದರೆ ಸರಿಯಲ್ಲ. ಖರೀದಿ ಪತ್ರ ಮತ್ತು ದಾನ ಪತ್ರಗಳ ಅಧಾರದ ಮೇಲೆ ಪುರಸಬೆಯಲ್ಲಿ ಖಾತೆ ಬದಲಾವಣೆ ಆಗಿರುತ್ತವೆ ಅಂದರೆ ಸರಿಯಲ್ಲ. ವಾದಿ ಈಗಲೂ ಕೂಡ ಕಂದಾಯ ಪಾವತಿ ಮಾಡುತ್ತಿದ್ದು ನಾವು ತೆಗೆದುಕೊಳ್ಳುತ್ತಿದ್ದೇವೆ ಅಂದರೆ ಸರಿ.

**ಸಾಕ್ಷಿಯ ಸಹಿ** **07.03.2026**

ಸಾಕ್ಷಿಯು ಮುಂದುವರೆದು ಮೂಲಭೂತ ಸೌಕರ್ಯ ಒದಗಿಸುವ ಉದ್ದೇಶದಿಂದ ಕಂದಾಯದ ಹಣವನ್ನು ತೆಗೆದುಕೊಳ್ಳುತಿದ್ದೇವೆ ಎಂದು ನುಡಿದರು.

2. ದಾವಾ ಸ್ವತ್ತಿನಲ್ಲಿ ವಾಸದ ಮನೆಯನ್ನು ಕಟ್ಟಲು ಹಿಂದಿನ ಪುರಸಭೆಯ ಮುಖ್ಯಾಧಿಕಾರಿಯವರು ದಿನಾಂಕ 11.02.2010 ರಂದು ವಾದಿಗೆ ಪರವಾನಿಗೆಯನ್ನು ನೀಡಿರುವರು ಅಂದರೆ ಸರಿಯಲ್ಲ. ಪುರಸಭೆಯ ನಿಯಮಾವಳಿಗಳ ಪ್ರಕರ ಕಟ್ಟಡ ಕಟ್ಟಲು ತಡವಾದರೆ ವರ್ಷಕೊಮ್ಮೆ ನವೀಕರಣ ಮಾಡಿಕೊಳ್ಳಬೇಕು ಎಂಬ ನಿಯಮ ಇದೆ ಅಂದರೆ ಸರಿ. ವಾದಿಯು 2012-13 ರಲ್ಲಿ ನವೀಕರಣವನ್ನು ಮಾಡಿಕೊಂಡಿರುವರು ಅಂದರೆ ಸರಿ. ವಾದಿ ಅಲ್ಲಿ ಪುರಸಭೆಯಿಂದ ಪರವಾನಿಗೆ ಮತ್ತು ನಕಾಶೆಯನ್ನು ಪಡೆದು ಮನೆ ಕಟ್ಟಿಕೊಂಡು ವಾಸ ಇರುವರು ಅಂದರೆ ಸರಿ.

3. ಹಿಂದಿನ ಮುಖ್ಯಾಧಿಕಾರಿಯವರು ದಾಖಲೆಗಳನ್ನು ಹಾಜರು ಪಡಿಸುವಂತೆ ವಾದಿಯ ವಿಕ್ರಯ ದಾರರಿಗೆ ನೊಟೀಸನ್ನು ನೀಡಿದ್ದರು ಅಂದರೆ

ಸರಿ. ಮುಖ್ಯಾಧಿಕಾರಿಯವರು ವಾದಿಗೆ ಯಾವುನೇ ನೋಟೀಸನ್ನು ನೀಡಿರುವುದಿಲ್ಲ ಅಂದರೆ ಸರಿ. ನಾವು ಏಕಾಏಕಿ ವಾದಿಯ ಸ್ವಾಧೀನಕ್ಕೆ ದಕ್ಕೆ ಪಡಿಸಿದ್ದೇವೆ ಅಂದರೆ ಸರಿಯಲ್ಲ. ವಾದಿ ಕಾನೂನು ಬದ್ದವಾಗಿ ಕ್ರಯ ಹೊಂದಿ ಸ್ವಾಧೀನದಲ್ಲಿರುವರು ಅಂದರೆ ಸರಿಯಲ್ಲ. ಈ ವರೆಗೆ ವಾದಿಯ ಹೆಸರಿಗೆ ಆಗಿರುವ ಖರೀದಿ ಪತ್ರವನುನ ನಾವು ಪ್ರಶ್ನೆ ಮಾಡಿರುವುದಿಲ್ಲ ಮತ್ತು ಮುಟೇಶನ್ ಅದೇಶವನ್ನು ಕೂಡ ಪ್ರಶ್ನೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

07-03-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 07.03.2026